# ಭಾಗ I
# ವೆಚ್ಚಗಳ ಲೆಕ್ಕಪರಿಶೋಧನೆ

# ಅಧ್ಯಾಯ I

# ಅಧ್ಯಾಯ–I

## ಪರಿಚಯ

### 1.1 ಈ ವರದಿಯ ಬಗ್ಗೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯ ಮೊದಲನೇ ಭಾಗವು ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ.

ಅನುಪಾಲನಾ ಲೆಕ್ಕಪರಿಶೋಧನೆಯು, ಭಾರತ ಸಂವಿಧಾನದ ನಿಬಂಧನೆಗಳು, ಅನ್ವಯಿಸುವ ಕಾನೂನುಗಳು, ನಿಯಮಗಳು, ಕಾಯಿದೆಗಳು, ಸಕ್ಷಮ ಪ್ರಾಧಿಕಾರದಿಂದ ಜಾರಿಯಾದ ಆದೇಶಗಳು ಮತ್ತು ಸೂಚನೆಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ತಿಳಿಯಲು ಲೆಕ್ಕಪರಿಶೋಧನೆ ಮಾಡಿದ ಇಲಾಖೆಗಳ ವಹಿವಾಟುಗಳ ಪರೀಕ್ಷೆಗೆ ಸಂಬಂಧಿಸಿರುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ವಿಧಾನಮಂಡಲದ ಗಮನಕ್ಕೆ ತರುವುದು ಈ ವರದಿಯ ಮುಖ್ಯ ಉದ್ದೇಶವಾಗಿದೆ. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು ಕಾರ್ಯಾಂಗಕ್ಕೆ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೂ ಉತ್ತಮ ಆಡಳಿತಕ್ಕಾಗಿ ಕಾರ್ಯನೀತಿಗಳನ್ನು ರೂಪಿಸಲು ಮತ್ತು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತವೆ ಎಂದು ನಿರೀಕ್ಷಿಸಲಾಗಿದೆ.

ಈ ಅಧ್ಯಾಯವು ಲೆಕ್ಕಪರಿಶೋಧನೆಯ ಯೋಜನೆ ಮತ್ತು ವ್ಯಾಪ್ತಿಯನ್ನು ವಿವರಿಸುವ ಜೊತೆಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಪಾಲನೆಯ ಸಾರಾಂಶವನ್ನೂ ಒಳಗೊಂಡಿದೆ. ಎರಡನೇ ಅಧ್ಯಾಯವು ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ವಹಿವಾಟುಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಅಂಶಗಳನ್ನು ಒಳಗೊಂಡಿವೆ.

### 1.2 ಆಯವ್ಯಯ ಚಿತ್ರಣ

2015–16ರಿಂದ 2019–20ರ ಅವಧಿಯಲ್ಲಿ ರಾಜ್ಯ ಸರ್ಕಾರದ ಆಯವ್ಯಯ ಅಂದಾಜುಗಳು ಮತ್ತು ಅದಕ್ಕೆ ಪ್ರತಿಯಾಗಿ ವಾಸ್ತವಿಕ ವೆಚ್ಚದ ಸ್ಥಿತಿಯನ್ನು **ಕೋಷ್ಟಕ–1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.1: 2015–16ರಿಂದ 2019–20ರ ಅವಧಿಯಲ್ಲಿ ರಾಜ್ಯದ ಆಯವ್ಯಯ ಮತ್ತು ವಾಸ್ತವಿಕ ವೆಚ್ಚ**

(₹ ಕೋಟಿಗಳಲ್ಲಿ)

| ವೆಚ್ಚ | 2015-16 | | 2016-17 | | 2017-18 | | 2018-19 | | 2019-20 | |
|---|---|---|---|---|---|---|---|---|---|---|
| | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ |
| ಸಾಮಾನ್ಯ ಸೇವೆಗಳು | 30,997 | 30,799 | 35,018 | 31,265 | 38,009 | 34,484 | 45,744 | 42,655 | 50,492 | 48,824 |
| ಸಾಮಾಜಿಕ ಸೇವೆಗಳು | 45,728 | 46,307 | 50,960 | 54,549 | 55,887 | 58,652 | 70,226 | 67,935 | 71,350 | 66,373 |
| ಆರ್ಥಿಕ ಸೇವೆಗಳು | 32,175 | 33,846 | 38,277 | 40,421 | 43,671 | 42,856 | 44,152 | 48,285 | 52,907 | 52,636 |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 6,549 | 6,076 | 5,980 | 5,686 | 7,187 | 6,490 | 6,167 | 5,425 | 6,856 | 6,425 |
| **ಒಟ್ಟು (1)** | **1,15,449** | **1,17,028** | **1,30,235** | **1,31,921** | **1,44,754** | **1,42,482** | **1,66,289** | **1,64,300** | **1,81,605** | **1,74,258** |

| ವೆಚ್ಚ | 2015–16 | | 2016–17 | | 2017–18 | | 2018–19 | | 2019–20 | |
|---|---|---|---|---|---|---|---|---|---|---|
| | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ |
| **ಬಂಡವಾಳ ವೆಚ್ಚ** | **20,564** | **20,713** | **25,716** | **28,150** | **32,033** | **30,667** | **35,246** | **34,659** | **40,080** | **35,530** |
| **ಬಟವಾಡೆ ಮಾಡಿದ ಸಾಲಗಳು ಮತ್ತು ಮುಂಗಡಗಳು** | **733** | **657** | **625** | **1,934** | **1,597** | **5,093** | **5,817** | **4,487** | **2,503** | **4,069** |
| ಸಾದಿಲ್ವಾರು ನಿಧಿ | 5,788 | 4,110 | 6,841 | 7,420 | 8,176 | 8,269 | 11,136 | 11,083 | 9,964 | 10,180 |
| ಸಾರ್ವಜನಿಕ ಲೆಕ್ಕ ಬಟವಾಡೆಗಳು | 5 | 0 | 5 | 0 | 5 | 0 | 5 | 0 | 5 | 0 |
| ಅಂತಿಮ ಶಿಲ್ಕು | 2,83,523 | 1,55,095* | 3,42,036 | 1,67,154* | 5,09,624 | 1,94,537* | 5,10,667 | 2,34,330* | 5,19,964 | 2,45,292* |
| ಸಾದಿಲ್ವಾರು ನಿಧಿ | – | 27,118 | – | 34,354 | – | 26,184 | – | 22,004 | – | 34,463 |
| **ಒಟ್ಟು (2)** | **3,10,613** | **2,07,693** | **3,75,223** | **2,39,012** | **5,51,435** | **2,64,750** | **5,62,871** | **3,06,563** | **5,72,516** | **3,29,534** |
| **ಒಟ್ಟು ಮೊತ್ತ (1+2)** | **4,26,062** | **3,24,721** | **5,05,458** | **3,70,933** | **6,96,189** | **4,07,232** | **7,29,160** | **4,70,863** | **7,54,121** | **5,03,792** |

***** ಹೂಡಿಕೆಗಳನ್ನು ಒಳಗೊಂಡಿಲ್ಲ.

ಆಧಾರ: ವಾರ್ಷಿಕ ಹಣಕಾಸು ತ:ಖ್ತೆಗಳು ಮತ್ತು ಸಂಬಂಧಪಟ್ಟ ವರ್ಷಗಳ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು

## 1.3 ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ

₹7,54,121 ಕೋಟಿಗಳ ಒಟ್ಟು ಆಯವ್ಯಯ ವೆಚ್ಚಕ್ಕೆ ಪ್ರತಿಯಾಗಿ 2019–20ರ ಅವಧಿಯಲ್ಲಿ ಸಂಪನ್ಮೂಲಗಳ ಅನ್ವಯವು ₹5,03,792 ಕೋಟಿಯಿದ್ದಿತು. ರಾಜ್ಯದ ಒಟ್ಟು ವೆಚ್ಚವು (ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲ ಮತ್ತು ಮುಂಗಡಗಳು) 2015–16ರಿಂದ 2019–20ರ ಅವಧಿಯಲ್ಲಿ ₹1,38,398 ಕೋಟಿಯಿಂದ ₹2,13,857 ಕೋಟಿಗೆ ಶೇಕಡಾ 55ರಷ್ಟು ಏರಿಕೆಯಾಗಿತ್ತು ಮತ್ತು ರಾಜಸ್ವ ವೆಚ್ಚವು ಇದೇ ಅವಧಿಯಲ್ಲಿ ₹1,17,028 ಕೋಟಿಯಿಂದ ₹1,74,258 ಕೋಟಿಗೆ ಶೇಕಡಾ 49ರಷ್ಟು ಏರಿಕೆಯಾಗಿತ್ತು. ರಾಜಸ್ವ ವೆಚ್ಚವು ಒಟ್ಟು ವೆಚ್ಚದ ಶೇಕಡಾ 80ರಿಂದ 85ರಷ್ಟಿದ್ದರೆ, 2015–16ರಿಂದ 2019–20ರ ಅವಧಿಯಲ್ಲಿ ಬಂಡವಾಳ ವೆಚ್ಚವು ಶೇಕಡಾ 15ರಿಂದ 17ರಷ್ಟಿತ್ತು.

2015–16ರಿಂದ 2019–20ರ ಅವಧಿಯಲ್ಲಿ, ಒಟ್ಟು ವೆಚ್ಚವು ವಾರ್ಷಿಕ ಸರಾಸರಿ ಶೇಕಡಾ 12ರಷ್ಟು ಏರಿಕೆಯಾಗಿದ್ದರೆ ರಾಜಸ್ವ ಸ್ವೀಕೃತಿಗಳು ವಾರ್ಷಿಕ ಸರಾಸರಿ ಬೆಳವಣಿಗೆಯ ಶೇಕಡಾ 11ರಷ್ಟು ಏರಿದ್ದವು.

## 1.4 ಸತತ ಉಳಿತಾಯಗಳು

ಕಳೆದ ಐದು ವರ್ಷಗಳಲ್ಲಿ, 29ರಲ್ಲಿ 13 ಅನುದಾನಗಳು ₹10 ಕೋಟಿಗಿಂತ ಹೆಚ್ಚಿನ ಉಳಿತಾಯವನ್ನು ತೋರಿಸಿದ್ದವು ಮತ್ತು ಇದು **ಕೋಷ್ಟಕ–1.2**ರಲ್ಲಿ ವಿವರಿಸಿರುವಂತೆ, ಒಟ್ಟು ಅನುದಾನಗಳಿಗಿಂತ ಶೇಕಡಾ ಐದು ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದವು.

**ಕೋಷ್ಟಕ–1.2: ಸತತ ಉಳಿತಾಯಗಳನ್ನು ತೋರಿಸುವ ಅನುದಾನಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನದ ಸಂಖ್ಯೆ ಮತ್ತು ಹೆಸರು | ಉಳಿತಾಯದ ಮೊತ್ತ | | | | |
|---|---|---|---|---|---|---|
| | | 2015–16 | 2016–17 | 2017–18 | 2018–19 | 2019–20 |
| ರಾಜಸ್ವ (ಪುರಸ್ಕೃತ) | | | | | | |
| 1 | 1–ಕೃಷಿ ಮತ್ತು ತೋಟಗಾರಿಕೆ | 803.18<br>(14) | 653.97<br>(10) | 455.50<br>(7) | 1,340.72<br>(17) | 1,178.55<br>(14) |

| ಕ್ರಮ ಸಂಖ್ಯೆ | ಅನುದಾನದ ಸಂಖ್ಯೆ ಮತ್ತು ಹೆಸರು | ಉಳಿತಾಯದ ಮೊತ್ತ | | | | |
|---|---|---|---|---|---|---|
| | | 2015–16 | 2016–17 | 2017–18 | 2018–19 | 2019–20 |
| 2 | 4–ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳು | 90.20 (16) | 143.15 (22) | 107.10 (14) | 165.93 (13) | 104.29 (10) |
| 3 | 12–ಮಾಹಿತಿ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 18.04 (5) | 34.15 (8) | 94.01 (11) | 98.11 (16) | 42.5 (9) |
| 4 | 21–ಜಲ ಸಂಪನ್ಮೂಲಗಳು | 198.62 (20) | 119.16 (12) | 169.89 (16) | 125.31 (12) | 290.53 (27) |
| 5 | 22–ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 904.50 (15) | 605.01 (9) | 403.91 (6) | 427.44 (5) | 756 (9) |
| 6 | 23–ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ | 126.72 (13) | 111.37 (12) | 606.35 (36) | 204.81 (16) | 222.91 (16) |
| 7 | 27–ಕಾನೂನು | 45.28 (7) | 72.89 (11) | 79.63 (10) | 59.28 (6) | 61.76 (6) |
| 8 | 28–ಸಂಸದೀಯ ವ್ಯವಹಾರಗಳು ಮತ್ತು ಶಾಸನ | 28.94 (16) | 24.82 (14) | 59.21 (25) | 34.33 (18) | 14.46 (8) |
| ರಾಜಸ್ವ (ಪ್ರಭೃತ) | | | | | | |
| 9 | 4– ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 16.24 (7) | 23.05 (10) | 24.34 (9) | 22.67 (15) | 56.52 (34) |
| ಬಂಡವಾಳ (ಪುರಸ್ಕೃತ) | | | | | | |
| 10 | 3–ಹಣಕಾಸು | 67.61 (46) | 37.97 (33) | 38.54 (30) | 34.52 (30) | 19.32 (15) |
| 11 | 11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 64.19 (13) | 49.91 (26) | 21.56 (11) | 71.55 (44) | 14.58 (15) |
| 12 | 12–ಮಾಹಿತಿ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 7.80 (21) | 93.28 (24) | 169.34 (35) | 242.22 (42) | 126.36 (27) |
| 13 | 21–ಜಲ ಸಂಪನ್ಮೂಲಗಳು | 2,231.65 (25) | 1,252.97 (13) | 2,638.20 (21) | 547.46 (5) | 1110.85 (8) |

ಟಿಪ್ಪಣಿ: ಕಂಸದಲ್ಲಿರುವ ಸಂಖ್ಯೆಗಳು ಒಟ್ಟು ಅವಕಾಶಕ್ಕೆ ಉಳಿತಾಯದ ಶೇಕಡಾವಾರನ್ನು ಸೂಚಿಸುತ್ತವೆ.

ಆಧಾರ: ಸಂಬಂಧಪಟ್ಟ ವರ್ಷಗಳ ಧನವಿನಿಯೋಗ ಲೆಕ್ಕಗಳು

## 1.5 ಭಾರತ ಸರ್ಕಾರದಿಂದ ಸಹಾಯಾನುದಾನಗಳು

**ಕೋಷ್ಟಕ–1.3**ರಲ್ಲಿ ತೋರಿಸಿರುವಂತೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2016–17ರಿಂದ 2019–20ರ ಅವಧಿಯಲ್ಲಿ ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನಗಳು ಏರಿಕೆಯ ಪ್ರವೃತ್ತಿಯನ್ನು ತೋರಿಸಿದವು.

**ಕೋಷ್ಟಕ–1.3: ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನಗಳು**[1]

**(₹ ಕೋಟಿಗಳಲ್ಲಿ)**

| ವಿವರಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಯೋಜನೇತರ ಅನುದಾನಗಳು* | 5,548 | 7,045 | – | – | – |
| ರಾಜ್ಯ ಯೋಜನೆಗಳಿಗೆ ಅನುದಾನಗಳು* | 8,105 | 8,102 | – | – | – |
| ಕೇಂದ್ರ ಯೋಜನೆಗಳಿಗೆ ಅನುದಾನಗಳು* | 139 | 116 | – | – | – |

[1] ಇದು ವರ್ಗಾವಣೆಗಳನ್ನು ಒಳಗೊಂಡಿಲ್ಲ

| ವಿವರಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 137 | 440 | 11,617 | 10,393 | 12,214 |
| ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನಗಳು | – | – | 7,316 | 11,714 | 17,593 |
| ಹಣಕಾಸು ಆಯೋಗದ ಅನುದಾನಗಳು | – | – | 2,708 | 3,374 | 4,673 |
| **ಒಟ್ಟು** | **13,929** | **15,703** | **21,641** | **25,481** | **34,480** |

* 2017–18ರಿಂದ ಅನುದಾನಗಳಿಗೆ ಯೋಜನೆ ಮತ್ತು ಯೋಜನೇತರ ಎಂಬ ನಾಮಕಾರಣವನ್ನು ತೆಗೆದುಹಾಕಲಾಗಿದ್ದು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು, ಹಣಕಾಸು ಆಯೋಗದ ಅನುದಾನಗಳು ಮತ್ತು ರಾಜ್ಯಗಳಿಗೆ ಇತರ ಅನುದಾನಗಳು ಎಂದು ಬದಲಿಸಲಾಗಿದ್ದರಿಂದ ಅಂಕಿಗಳನ್ನು ತೋರಿಸಲಾಗಿಲ್ಲ.

## 1.6 ಲೆಕ್ಕಪರಿಶೋಧನೆಗೆ ಅಧ್ಯಾದೇಶ

ಭಾರತ ಸಂವಿಧಾನದ 149 ಮತ್ತು 151ನೇ ಅನುಚ್ಛೇದಗಳು ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) (ಡಿಪಿಸಿ) ಅಧಿನಿಯಮ, 1971, ಸಿಎಜಿಯವರಿಗೆ ಲೆಕ್ಕಪರಿಶೋಧನೆಗಾಗಿ ಅಧ್ಯಾದೇಶವನ್ನು ನೀಡುತ್ತವೆ. ಸಿಎಜಿರವರು ಸದರಿ ಅಧಿನಿಯಮದ ಪರಿಚ್ಛೇದ 13ರ[2] ಅಡಿಯಲ್ಲಿ ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚದ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಅಧಿನಿಯಮದ ಪರಿಚ್ಛೇದ 19(2)[3] ಮತ್ತು 19(3)[4] ರಡಿಯಲ್ಲಿ ಲೆಕ್ಕಪರಿಶೋಧನೆ ನಡೆಸುವ ಮೂರು ಸ್ವಾಯತ್ತ ಸಂಸ್ಥೆಗಳಿಗೆ ಸಿಎಜಿಯವರೇ ಲೆಕ್ಕಪರಿಶೋಧಕರಾಗಿರುತ್ತಾರೆ. ಇದಲ್ಲದೇ, ಅಧಿನಿಯಮದ ಪರಿಚ್ಛೇದ 14[5] ರಡಿಯಲ್ಲಿ ಸರ್ಕಾರದಿಂದ ಬಹುಪಾಲು ಹಣ ಪಡೆಯುವ ಇತರೆ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನೂ ಸಹ ಸಿಎಜಿರವರು ನಡೆಸುತ್ತಾರೆ. ಹಲವಾರು ಲೆಕ್ಕಪರಿಶೋಧನೆಗಳಿಗೆ ತತ್ವಗಳನ್ನು ಮತ್ತು ವಿಧಾನಗಳನ್ನು ಸಿಎಜಿರವರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳು ಮತ್ತು ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ನಿಯಮಾವಳಿಗಳು, 2007[6] ಇವುಗಳಲ್ಲಿ ನಿಗದಿಪಡಿಸಲಾಗಿದೆ.

## 1.7 ಪ್ರಧಾನ ಮಹಾಲೇಖಾಪಾಲರು (ಆಡಿಟ್–I), ಕರ್ನಾಟಕ, ಬೆಂಗಳೂರು, ಕಛೇರಿಯ ಸಾಂಸ್ಥಿಕ ರಚನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯಗಳ ಕಛೇರಿಗಳನ್ನು ಕ್ಲಸ್ಟರ್‌ಗಳ ಹಂಚಿಕೆಯ ಆಧಾರದ ಮೇಲೆ ಪುನರ್–ರಚಿಸಲಾಯಿತು (ಮಾರ್ಚ್ 2020), ಪ್ರತಿ ಕ್ಲಸ್ಟರ್ ಪರಸ್ಪರ ಸಂಪರ್ಕಿತ ಫಲಿತಾಂಶಗಳು ಮತ್ತು ಕೊಂಡಿಗಳನ್ನು ಹೊಂದಿರುವ ಇಲಾಖೆಗಳನ್ನು ಒಳಗೊಂಡಿರುತ್ತದೆ. ಪುನರ್–ರಚನೆಗೆ ಮುಂಚಿತವಾಗಿ, ಪ್ರಧಾನ ಮಹಾಲೇಖಾಪಾಲರು (ಆಡಿಟ್–I), ಕರ್ನಾಟಕ,

---

[2] (i) ರಾಜ್ಯದ ಸಂಚಿತ ನಿಧಿಯಿಂದ ಆಗುವ ಎಲ್ಲ ವಹಿವಾಟುಗಳ (ii) ಸಾದಿಲ್ವಾರು ನಿಧಿಗೆ ಮತ್ತು ಸಾರ್ವಜನಿಕ ಲೆಕ್ಕಕ್ಕೆ ಸಂಬಂಧಿಸಿದ ವಹಿವಾಟುಗಳು ಮತ್ತು (iii) ಎಲ್ಲ ವ್ಯಾಪಾರ, ತಯಾರಿಕೆ, ಲಾಭ ಮತ್ತು ನಷ್ಟದ ಲೆಕ್ಕಗಳು, ಆಢಾವೆ ಪಟ್ಟಿಕೆ (ಬ್ಯಾಲೆನ್ಸ್ ಶೀಟ್) ಮತ್ತು ಇತರೆ ಅಧೀನ ಲೆಕ್ಕಗಳು.

[3] ಸಂಬಂಧಪಟ್ಟ ಶಾಸನದ ನಿಬಂಧನೆಗಳ ಪ್ರಕಾರ ಸಂಸತ್ತಿನ ನಿಯಮದಿಂದ ರಚಿತವಾಗಿರುವ ನಿಗಮಗಳ (ಕಂಪನಿಗಳಲ್ಲದ) ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[4] ರಾಜ್ಯ ವಿಧಾನಮಂಡಲದ ಶಾಸನ ನಿಬಂಧನೆಗಳ ಪ್ರಕಾರ ರಾಜ್ಯಪಾಲರ ಕೋರಿಕೆಯ ಮೇರೆಗೆ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[5] (i) ರಾಜ್ಯದ ಸಂಚಿತ ನಿಧಿಯಿಂದ ಅನುದಾನಗಳು ಅಥವಾ ಸಾಲಗಳ ಮುಖಾಂತರ ಬಹುಮಟ್ಟಿಗೆ ಹಣಕಾಸು ಒದಗಿಸುವ ಸಂಸ್ಥೆ/ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚದ ಲೆಕ್ಕಪರಿಶೋಧನೆ (ii) ರಾಜ್ಯದ ಸಂಚಿತ ನಿಧಿಯಿಂದ ₹ಒಂದು ಕೋಟಿಗೂ ಕಡಿಮೆಯಿಲ್ಲದಂತೆ ಅನುದಾನ ಅಥವಾ ಸಾಲ ಪಡೆಯುವ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚಗಳ ಲೆಕ್ಕಪರಿಶೊಧನೆ.

[6] 2020ರಲ್ಲಿ ತಿದ್ದುಪಡಿಗೊಂಡಿದೆ.

ಬೆಂಗಳೂರು, ಇವರು ರಾಜ್ಯದ 65 ಇಲಾಖೆಗಳು ಮತ್ತು ಸಾಮಾನ್ಯ ಮತ್ತು ಸಾಮಾಜಿಕ ಸೇವಾ ವಲಯಗಳ ಅಡಿಯಲ್ಲಿ 11 ಸ್ವಾಯತ್ತ ಸಂಸ್ಥೆಗಳು ಮಾಡಿರುವ ವೆಚ್ಚದ ಲೆಕ್ಕಪರಿಶೋಧನೆಗೆ ಜವಾಬ್ದಾರರಾಗಿದ್ದರು. ಪುನರ್–ರಚನೆಯ ನಂತರ, ಹಣಕಾಸು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ, ಕೃಷಿ, ಆಹಾರ ಮತ್ತು ಸಂಬಂಧಿತ ಕೈಗಾರಿಕೆಗಳು, ಜಲ ಸಂಪನ್ಮೂಲಗಳು, ಸಾಮಾನ್ಯ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿ ಕ್ಲಸ್ಟರ್‌ಗಳಡಿಯಲ್ಲಿನ 54 ಇಲಾಖೆಗಳು ಮತ್ತು 03 ಸ್ವಾಯತ್ತ ಸಂಸ್ಥೆಗಳು ಮಾಡಿದ ವೆಚ್ಚದ ಲೆಕ್ಕಪರಿಶೋಧನೆಗೆ ಪ್ರಧಾನ ಮಹಾಲೇಖಾಪಾಲರು (ಆಡಿಟ್–I) ಜವಾಬ್ದಾರರಾಗಿದ್ದಾರೆ. ಪ್ರಧಾನ ಮಹಾಲೇಖಾಪಾಲರು (ಆಡಿಟ್–I) ಇವರಿಗೆ ಮೂವರು ಉಪ ಮಹಾಲೇಖಾಪಾಲರುಗಳು ಮತ್ತು ವಿವಿಧ ಅಧೀನ ಅಧಿಕಾರಿಗಳು ನೆರವು ನೀಡುತ್ತಾರೆ. ಈ ವರದಿಯು ಪ್ರಧಾನ ಮಹಾಲೇಖಾಪಾಲರ (ಆಡಿಟ್–I) ವ್ಯಾಪ್ತಿಯಲ್ಲಿರುವ ಇಲಾಖೆಗಳಿಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳನ್ನು ಒಳಗೊಂಡಿದೆ.

## 1.8 ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ

ಇಲಾಖೆಗಳು ಎದುರಿಸುವ ಸಂಭವನೀಯ ಅಪಾಯಗಳ ಆಧಾರದ ಮೇಲೆ ಸರ್ಕಾರದ ಹಲವಾರು ಇಲಾಖೆಗಳು ಭರಿಸಿದ ವೆಚ್ಚ, ಚಟುವಟಿಕೆಗಳ ವಿಮರ್ಶಕತ್ವ/ಸಂಕೀರ್ಣತೆ, ನೀಡಿದ ಹಣಕಾಸಿನ ಅಧಿಕಾರಗಳು, ಒಟ್ಟಾರೆ ಆಂತರಿಕ ನಿಯಂತ್ರಣಗಳ ನಿರ್ಧಾರಣೆಗಳ ಆಧಾರದ ಮೇಲೆ ಮತ್ತು ಹೂಡಿಕೆದಾರರ ಆಸಕ್ತಿಗಳನ್ನು ನಿರ್ಧರಿಸಿ ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ. ಈ ವಿಧಾನದಲ್ಲಿ ಹಿಂದಿನ ಲೆಕ್ಕಪರಿಶೋಧನಾ ಅಂಶಗಳನ್ನೂ ಸಹ ಪರಿಗಣಿಸಲಾಗುತ್ತದೆ. ಅಪಾಯದ ಸಂಭವನೀಯತೆಯ ಆಧಾರದ ಮೇಲೆ ಲೆಕ್ಕಪರಿಶೋಧನೆಯ ಕಾಲಾವಧಿ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗುವುದು.

ಪ್ರತಿಯೊಂದು ಘಟಕದ ಲೆಕ್ಕಪರಿಶೋಧನೆಯ ನಂತರ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಒಳಗೊಂಡ ತಪಾಸಣಾ ವರದಿಗಳನ್ನು ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಲಾಗುತ್ತದೆ. ತಪಾಸಣಾ ವರದಿಗಳು ಸ್ವೀಕೃತಗೊಂಡ ಒಂದು ತಿಂಗಳೊಳಗಾಗಿ ಲೆಕ್ಕಪರಿಶೋಧನಾ ಅಂಶಗಳಿಗೆ ಉತ್ತರಗಳನ್ನು ಸಲ್ಲಿಸಲು ಇಲಾಖೆಗಳನ್ನು ಕೋರಲಾಗುತ್ತದೆ. ಉತ್ತರಗಳನ್ನು ಸ್ವೀಕರಿಸಿದಾಗ ಲೆಕ್ಕಪರಿಶೋಧನಾ ಅಂಶಗಳನ್ನು ಇತ್ಯರ್ಥಗೊಳಿಸಲಾಗುವುದು ಅಥವಾ ಅನುಪಾಲನೆಗಾಗಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸಲಹೆ ನೀಡಲಾಗುವುದು. ಈ ತಪಾಸಣಾ ವರದಿಗಳಲ್ಲಿನ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳನ್ನು, ಭಾರತ ಸಂವಿಧಾನದ ಅನುಚ್ಛೇದ 151ರಡಿಯಲ್ಲಿ ವಿಧಾನ ಮಂಡಲದಲ್ಲಿ ಮಂಡಿಸುವ ಸಲುವಾಗಿ ರಾಜ್ಯಪಾಲರಿಗೆ ಸಲ್ಲಿಸಲಾಗುವ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲು ಸಂಸ್ಕರಿಸಲಾಗುವುದು.

2019–20ರ ಅವಧಿಯಲ್ಲಿ ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನಾ ವಿಭಾಗದಲ್ಲಿ ಪುನರ್ ರಚನೆಯ ಪೂರ್ವದಲ್ಲಿ 6,161 ಲೆಕ್ಕಪರಿಶೋಧನಾ ತಂಡ ದಿನಗಳನ್ನು ಬಳಸಿ 622 ಘಟಕಗಳ ಲೆಕ್ಕಪರಿಶೋಧನೆಯನ್ನು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಅನುಪಾಲನಾ ಲೆಕ್ಕಪರಿಶೋಧನೆಗಳನ್ನು ನಡೆಸಲಾಯಿತು. ಅದೇ ರೀತಿ 447 ತಂಡ ದಿನಗಳನ್ನು ಬಳಸಿ 26 ಘಟಕಗಳ ಹಣಕಾಸಿನ ಲೆಕ್ಕಪರಿಶೋಧನೆಯನ್ನು (ಪ್ರಮಾಣೀಕರಣ) ನಡೆಸಲಾಯಿತು.

## 1.9 ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ

ಲೆಕ್ಕಪರಿಶೋಧನೆಯು ಈ ಕೆಳಗಿನವುಗಳಲ್ಲಿ ಪ್ರಮುಖ ಲೋಪಗಳನ್ನು ವರದಿ ಮಾಡಿತು:

- ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಅನುಷ್ಠಾನದಲ್ಲಿ;
- ಆಯ್ದ ಇಲಾಖೆಗಳಲ್ಲಿ ಆಂತರಿಕ ನಿಯಂತ್ರಣಗಳಲ್ಲಿನ ಲೋಪಗಳು;

- ಸರ್ಕಾರೀ ಇಲಾಖೆಗಳು/ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳು

ಈ ವರದಿಯ ಭಾಗ–I ರಲ್ಲಿ ಸೇರಿಸಿರುವ ಒಂಬತ್ತು ಕಂಡಿಕೆಗಳನ್ನು ಅರೆ–ಸರ್ಕಾರಿ ಪತ್ರದ ಮುಖಾಂತರ ಸಂಬಂಧಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ, ಆರು ವಾರಗಳೊಳಗೆ ಅವರ ಪ್ರತಿಕ್ರಿಯೆಯನ್ನು ನೀಡುವಂತೆ ಕೋರಿ, ಜನವರಿ ಮತ್ತು ಮಾರ್ಚ್ 2021ರ ನಡುವೆ ಕಳುಹಿಸಲಾಯಿತು. ಆರು ಕಂಡಿಕೆಗಳಿಗೆ ಸರ್ಕಾರದ ಉತ್ತರಗಳನ್ನು ಸ್ವೀಕರಿಸಲಾಗಿದೆ ಮತ್ತು ಉತ್ತರಗಳನ್ನು ವರದಿಯಲ್ಲಿ ಸಮರ್ಪಕವಾಗಿ ಅಳವಡಿಸಿಕೊಳ್ಳಲಾಗಿದೆ.

## 1.10 ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

### *1.10.1 ಬಾಕಿ ಇರುವ ತಪಾಸಣಾ ವರದಿಗಳು*

ಲೆಕ್ಕಪರಿಶೋಧನಾ ಅಭಿಪ್ರಾಯಗಳ ತ್ವರಿತಗತಿಯ ಇತ್ಯರ್ಥಕ್ಕಾಗಿ ಆರ್ಥಿಕ ಇಲಾಖೆಯಿಂದ 2001ರಲ್ಲಿ ಹೊರಡಿಸಲ್ಪಟ್ಟಿರುವ ಸೂಚನೆಗಳ ಕೈಪಿಡಿಯು ನಿಗದಿಪಡಿಸಿದ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯಿಂದ ಸರಿಪಡಿಸುವ ಕ್ರಮಗಳ ಮತ್ತು ತಪಾಸಣೆಯಲ್ಲಿ ಗಮನಿಸಿದ ನ್ಯೂನತೆಗಳು, ಲೋಪಗಳು, ಮುಂತಾದವುಗಳಿಗಾಗಿ ಹೊಣೆಗಾರಿಕೆಯನ್ನು ಖಾತರಿಪಡಿಸಿಕೊಳ್ಳಲು ಮಹಾಲೇಖಾಪಾಲರಿಂದ ನೀಡಲ್ಪಟ್ಟ ತಪಾಸಣಾ ವರದಿಗಳಿಗೆ (ಐಆರ್) ಕಾರ್ಯಾಂಗವು ಚುರುಕಾದ ಪ್ರತಿಕ್ರಿಯೆ ನೀಡಬೇಕೆಂದು ನಿಗದಿಪಡಿಸುತ್ತವೆ. ಕಛೇರಿಗಳ ಮುಖ್ಯಸ್ಥರುಗಳು ಮತ್ತು ನಂತರದ ಮೇಲಧಿಕಾರಿಗಳು ಐಆರ್‌ಗಳಲ್ಲಿರುವ ಅಭಿಪ್ರಾಯಗಳನ್ನು ಅನುಪಾಲಿಸಬೇಕು, ಲೋಪದೋಷಗಳನ್ನು ಸರಿಪಡಿಸಬೇಕು ಮತ್ತು ಮಹಾಲೇಖಾಪಾಲರಿಗೆ ವರದಿಯನ್ನು ಕಳುಹಿಸಬೇಕು ಹಾಗೂ ಮಹಾಲೇಖಾಪಾಲರು ಲೆಕ್ಕಪರಿಶೋಧನಾ ಅಭಿಪ್ರಾಯಗಳ ಮೇಲ್ವಿಚಾರಣೆಗೆ ಅನುವಾಗಲು ಬಾಕಿ ಇರುವ ತಪಾಸಣಾ ವರದಿಗಳ ಅರ್ಧವಾರ್ಷಿಕ ವರದಿಯೊಂದನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾರೆ.

31 ಮಾರ್ಚ್ 2020ರಲ್ಲಿದ್ದಂತೆ 54 ಇಲಾಖೆಗಳಿಗೆ[7] ಪ್ರತಿಯಾಗಿ 7,516 ತಪಾಸಣಾ ವರದಿಗಳು (38,140 ಕಂಡಿಕೆಗಳು) ಬಾಕಿ ಉಳಿದಿದ್ದವು. ಬಾಕಿಯಿರುವ ವರದಿಗಳ ವರ್ಷಾವಾರು ವಿವರಗಳನ್ನು **ಕೋಷ್ಟಕ–1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.4: ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ಬಾಕಿಯ ವರ್ಷಾವಾರು ವಿವರಗಳು**

| ಕ್ರಮ ಸಂಖ್ಯೆ | ವರ್ಷಗಳು | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|---|
| 1 | ಒಂದು ವರ್ಷಕ್ಕಿಂತ ಕಡಿಮೆ | 291 | 2,941 |
| 2 | 1ರಿಂದ 2 ವರ್ಷಗಳು | 721 | 7,458 |
| 3 | 2ರಿಂದ 5 ವರ್ಷಗಳು | 2,224 | 13,783 |
| 4 | 6ರಿಂದ 10 ವರ್ಷಗಳು | 1,719 | 7,113 |
| 5 | 10 ವರ್ಷಗಳಿಗೂ ಅಧಿಕ | 2,561 | 6,845 |
| **ಒಟ್ಟು** | | **7,516** | **38,140** |

ಆಧಾರ: ಪ್ರಧಾನ ಮಹಾಲೇಖಾಪಾಲರ (ಆಡಿಟ್–I) ಕಛೇರಿಯಲ್ಲಿ ನಿರ್ವಹಿಸಿರುವ ತಪಾಸಣಾ ವರದಿಗಳ ರಿಜಿಸ್ಟರ್‌ಗಳಿಂದ ಪಡೆದುಕೊಂಡ ಮಾಹಿತಿ

[7] ಪ್ರಧಾನ ಮಹಾಲೇಖಾಪಾಲರು (ಆಡಿಟ್–I), ಕರ್ನಾಟಕ, ಬೆಂಗಳೂರು ಕಚೇರಿಯ ಪುನರ್–ರಚನೆಯ ನಂತರದ ವ್ಯಾಪ್ತಿಯಲ್ಲಿರುವ ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿ.

ಮಾರ್ಚ್ 2020ರ ಅಂತ್ಯದವರೆಗೆ ಜಾರಿ ಮಾಡಲಾಗಿದ್ದ ಬಾಕಿ ಉಳಿದಿರುವ ತಪಾಸಣಾ ವರದಿಗಳ ಸಮೀಕ್ಷೆಯು ಬಾಕಿ ಉಳಿದಿದ್ದ ಒಟ್ಟು ತಪಾಸಣಾ ವರದಿಗಳ ಶೇಕಡಾ 4ರಷ್ಟು ಅಂದರೆ 291 ತಪಾಸಣಾ ವರದಿಗಳು (2,941 ಕಂಡಿಕೆಗಳು) ಒಂದು ವರ್ಷಕ್ಕೂ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು, 4,664 ತಪಾಸಣಾ ವರದಿಗಳು (28,354 ಕಂಡಿಕೆಗಳು) ಒಂದು ವರ್ಷಕ್ಕೂ ಅಧಿಕವಾಗಿ ಆದರೆ 10 ವರ್ಷಕ್ಕೂ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು ಎಂಬುದನ್ನು ತೋರಿಸಿತು. ಆದರೆ, ಶೇಕಡಾ 34ರಷ್ಟು ತಪಾಸಣಾ ವರದಿಗಳು ಅಂದರೆ 2,561 ತಪಾಸಣಾ ವರದಿಗಳು (6,845 ಕಂಡಿಕೆಗಳು) 10 ವರ್ಷಗಳಿಗೂ ಅಧಿಕ ಅವಧಿಗೆ ಬಾಕಿ ಉಳಿದಿದ್ದವು. ಅಲ್ಲದೆ, 10 ವರ್ಷಗಳಿಗೂ ಅಧಿಕವಾಗಿ ಬಾಕಿ ಇರುವ ತಪಾಸಣಾ ವರದಿಗಳ ಸಮೀಕ್ಷೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಅನುಕ್ರಮವಾಗಿ 693, 354 ಮತ್ತು 219ರಷ್ಟು ಅಧಿಕ ಸಂಖ್ಯೆಯ ತಪಾಸಣಾ ವರದಿಗಳನ್ನು ಬಾಕಿ ಉಳಿಸಿಕೊಂಡಿದ್ದವೆಂದು ಪ್ರಕಟಪಡಿಸಿತು. ಬಾಕಿ ಇರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ಮತ್ತು ಇಲಾಖಾವಾರು ವಿವರಗಳನ್ನು **ಅನುಬಂಧ–1.1**ರಲ್ಲಿ ನೀಡಲಾಗಿದೆ.

### *1.10.2 ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮ*

ಕೈಪಿಡಿ ಹಾಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನ ನಿಯಮಾವಳಿಗಳು (ಆಂತರಿಕ ವ್ಯವಹಾರ), 1999, ಸರ್ಕಾರದ ಎಲ್ಲ ಇಲಾಖೆಗಳಿಂದ ಲೆಕ್ಕಪರಿಶೋಧನಾ ವರದಿಗಳಲ್ಲಿ ನಿರೂಪಿಸಲಾದ ಅಭಿಪ್ರಾಯಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳ (ಎಟಿಎನ್‌ಗಳ) ರೂಪದಲ್ಲಿ ವಿವರವಾದ ಸ್ಪಷ್ಟೀಕರಣಗಳನ್ನು ಅವು ವಿಧಾನಮಂಡಲದಲ್ಲಿ ಮಂಡನೆಯಾದ ನಾಲ್ಕು ತಿಂಗಳುಗಳ ಒಳಗಾಗಿ ಲೆಕ್ಕಪರಿಶೋಧನಾ ಕಛೇರಿಗೆ ಅವುಗಳ ಪ್ರತಿಗಳೊಂದಿಗೆ ಕರ್ನಾಟಕ ವಿಧಾನಮಂಡಲದ ಸಚಿವಾಲಯಕ್ಕೆ ಸಲ್ಲಿಸಬೇಕೆಂದು ಉಪಬಂಧಿಸುತ್ತವೆ.

ಆಡಳಿತ ಇಲಾಖೆಗಳು ಈ ಸೂಚನೆಗಳನ್ನು ಪಾಲಿಸಲಿಲ್ಲ ಮತ್ತು **ಕೋಷ್ಟಕ 1.5**ರಲ್ಲಿ ವಿವರಿಸಿರುವಂತೆ ಒಂಭತ್ತು ಇಲಾಖೆಗಳು, 31 ಡಿಸೆಂಬರ್ 2020ರಲ್ಲಿದ್ದಂತೆ 2003–04ರಿಂದ 2017–18ರ ಅವಧಿಯ 19 ಕಂಡಿಕೆಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

**ಕೋಷ್ಟಕ–1.5: 31 ಡಿಸೆಂಬರ್ 2020ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು**
**(ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ)**

| ಕ್ರಮ ಸಂಖ್ಯೆ | ಇಲಾಖೆ | 03–04 | 11–12 | 12–13 | 14–15 | 16–17 | 17–18 | ಒಟ್ಟು |
|---|---|---|---|---|---|---|---|---|
| 1 | ಶಿಕ್ಷಣ | – | – | – | – | – | 3 | 3 |
| 2 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳು | – | – | – | – | 1 | – | 1 |
| 3 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) | – | – | – | 1 | – | – | 1 |
| 4 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | – | – | – | – | – | 1 | 1 |
| 5 | ತೋಟಗಾರಿಕೆ/ರೇಷ್ಮೆ ವ್ಯವಸಾಯ | – | – | – | – | – | 1 | 1 |
| 6 | ಸಣ್ಣ ನೀರಾವರಿ | 1 | – | – | – | 1 | 2 | 4 |
| 7 | ಅಲ್ಪಸಂಖ್ಯಾತರ ಕಲ್ಯಾಣ | – | – | – | – | – | 2 | 2 |
| 8 | ಕಂದಾಯ | – | 1 | 2 | – | – | 1 | 4 |
| 9 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ | – | – | – | – | – | 2 | 2 |
| | **ಒಟ್ಟು** | **1** | **1** | **2** | **1** | **2** | **12** | **19** |

ಆಧಾರ: ಪ್ರಧಾನ ಮಹಾಲೇಖಪಾಲರ (ಲೆಕ್ಕಪರಿಶೋಧನೆ–1) ಕಛೇರಿಯಲ್ಲಿ ನಿರ್ವಹಿಸಿರುವ ಸಾರ್ವಜನಿಕ ಲೆಕ್ಕಪತ್ರ ಇಲಾಖಾ ವಾಚ್ ರಿಜಿಸ್ಟರ್‌ಗಳಿಂದ ಪಡೆದುಕೊಂಡ ಮಾಹಿತಿ

### *1.10.3 ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು*

31 ಡಿಸೆಂಬರ್ 2020ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳ ಸ್ಥಿತಿಯ ಸಮೀಕ್ಷೆಯು 85 ಕಂಡಿಕೆಗಳು (ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಸಮೀಕ್ಷೆಗಳನ್ನು ಒಳಗೊಂಡು) ಇನ್ನೂ ಚರ್ಚೆಯಾಗಬೇಕಿರುವುದನ್ನು ತೋರಿಸಿತು. 31 ಡಿಸೆಂಬರ್ 2020ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗಾಗಿ ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) **ಅನುಬಂಧ–1.2**ರಲ್ಲಿ ನೀಡಲಾಗಿದೆ.

## 1.11 ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ

ಶಿಕ್ಷಣ, ಕಾರ್ಮಿಕ ಕಲ್ಯಾಣ ಮತ್ತು ಮಕ್ಕಳ ಕಲ್ಯಾಣ ಕ್ಷೇತ್ರಗಳಲ್ಲಿ ಸರ್ಕಾರವು ಹಲವು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಪ್ರಧಾನ ಮಹಾಲೇಖಾಪಾಲರು (ಆಡಿಟ್–I)ರ ಅಧಿಕಾರ ವ್ಯಾಪ್ತಿಯಲ್ಲಿನ ರಾಜ್ಯದ ಮೂರು ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಲೆಕ್ಕಪರಿಶೋಧನೆಯ ನಿಯೋಜನೆ, ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಸಲ್ಲಿಸುವುದು, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು (ಎಸ್ಎಆರ್) ಜಾರಿ ಮಾಡಿರುವುದು ಮತ್ತು ವಿಧಾನಮಂಡಲದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು **ಕೋಷ್ಟಕ–1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.6: ಲೆಕ್ಕಪರಿಶೋಧನೆಯ ನಿಯೋಜನೆ, ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಜಾರಿಮಾಡಿದ ಸ್ಥಿತಿ**

| ಕ್ರಮ ಸಂಖ್ಯೆ | ಸ್ವಾಯತ್ತ ಸಂಸ್ಥೆಯ ಹೆಸರು | ಸಿಎಜಿರವರಿಗೆ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ವಹಿಸಿರುವ ಅವಧಿ | ಎಲ್ಲಿಯವರೆಗೆ ಲೆಕ್ಕಪತ್ರಗಳನ್ನು ಸಲ್ಲಿಸಲಾಗಿದೆ | ಲೆಕ್ಕಪರಿಶೋಧನಾ ವರದಿಗಳನ್ನು ಯಾವ ವರ್ಷದವರೆಗೆ ಜಾರಿ ಮಾಡಲಾಗಿದೆ | ಶಾಸಕಾಂಗದಲ್ಲಿ ಲೆಕ್ಕಪರಿಶೋಧನಾ ವರದಿಗಳ ಮಂಡನೆ | ಯಾವ ವರ್ಷದವರೆಗೆ ಲೆಕ್ಕಪತ್ರಗಳನ್ನು ಬಾಕಿ ಇವೆ | ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿ ವಿಳಂಬ (30 ಜೂನ್ 2020ರವರೆಗೆ |
|---|---|---|---|---|---|---|---|
| 1 | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು | ಅಧಿನಿಯಮದ ಅನ್ವಯ | 2016–17 | 2015–16 | ವರದಿಯನ್ನು ಇನ್ನೂ ಮಂಡಿಸಿಲ್ಲ (2006–07 ರಿಂದ 2015–16) | ಲಭ್ಯವಿಲ್ಲ | ಲಭ್ಯವಿಲ್ಲ |
| 2 | ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು | 2020–21 ವರೆಗೆ | 2006–07 | 2006–07ರ ಎಸ್ಎಆರ್ ಅನ್ನು 24.01.2020 ರಂದು ಜಾರಿ ಮಾಡಲಾಗಿದೆ | ಶೂನ್ಯ | ಲಭ್ಯವಿಲ್ಲ | ಲಭ್ಯವಿಲ್ಲ |
| 3 | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ, ಬೆಂಗಳೂರು | ಅಧಿನಿಯಮದ ಅನ್ವಯ | ಜುಲೈ 2009ರಲ್ಲಿ ಸ್ಥಾಪಿಸಲಾಯಿತು. ಪ್ರಾರಂಭವಾದಾಗಿನಿಂದ ಲೆಕ್ಕಪತ್ರಗಳನ್ನು ಸಲ್ಲಿಸಬೇಕಿದೆ. | | | | |

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು 2006–07ರಿಂದ 2015–16ನೇ ವರ್ಷಗಳಿಗೆ ಎಸ್ಎಆರ್‌ಗಳನ್ನು ರಾಜ್ಯ ಶಾಸಕಾಂಗದಲ್ಲಿ ಮಂಡಿಸಿಲ್ಲ. ಕರ್ನಾಟಕ ಪಠ್ಯಪುಸ್ತಕ ಸಂಘವು 2007–08ನೇ ಸಾಲಿನ ಪರಿಷ್ಕೃತ ಲೆಕ್ಕಪತ್ರಗಳನ್ನು ಇನ್ನೂ ಸಲ್ಲಿಸಿಲ್ಲ ಮತ್ತು ಕರ್ನಾಟಕ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು (ಜುಲೈ 2009ರಲ್ಲಿ ಸ್ಥಾಪನೆಯಾಯಿತು) ಪ್ರಾರಂಭದಿಂದಲೂ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿಲ್ಲ. ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆಯಲ್ಲಿನ ವಿಳಂಬವು ಹಣಕಾಸಿನ

ಅಕ್ರಮಗಳು ಪತ್ತೆ ಹಚ್ಚಲಾಗದ ಅಪಾಯವನ್ನು ಹೊಂದಿದೆಯಾದ್ದರಿಂದ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಶೀಘ್ರವಾಗಿ ಲೆಕ್ಕಪರಿಶೋಧನೆಗೆ ಸಲ್ಲಿಸಬೇಕು.

## 1.12 ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು

ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳನ್ನು ಅವುಗಳ ಹಣದ ಮೌಲ್ಯದೊಂದಿಗೆ **ಕೋಷ್ಟಕ 1.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.7: 2016–17ರಿಂದ 2019–20ರ ಅವಧಿಯಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವಿವರಗಳು**

| ವರ್ಷ | ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ | | ಕಂಡಿಕೆಗಳು | | ಸ್ವೀಕರಿಸಿದ ಉತ್ತರಗಳು | |
|---|---|---|---|---|---|---|
| | ಸಂಖ್ಯೆ | ಹಣದ ಮೌಲ್ಯ (₹ ಕೋಟಿಗಳಲ್ಲಿ) | ಸಂಖ್ಯೆ | ಹಣದ ಮೌಲ್ಯ (₹ ಕೋಟಿಗಳಲ್ಲಿ) | ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 2016–17 | 01 | 247.98 | 12 | 50.85 | 01 | 12 |
| 2017–18 | 01 | 265.82 | 12 | 286.37 | 01 | 12 |
| 2018–29 | 01 | 7.01 | 17 | 2,802.96 | 01 | 17 |

ಆಧಾರ: 2016–17, 2017–18ರ ಮತ್ತು 2018–19ರ ವರ್ಷದ ಲೆಕ್ಕಪರಿಶೋಧನಾ ವರದಿಗಳು (ಸಾಮಾನ್ಯ ಮತ್ತು ಸಾಮಾಜಿಕ ಲೆಕ್ಕಪರಿಶೋಧನಾ ವಲಯ)

2019–20ರ ಅವಧಿಯಲ್ಲಿ ₹68.90 ಕೋಟಿಯನ್ನು ಒಳಗೊಂಡ ಒಂಭತ್ತು ಕಂಡಿಕೆಗಳನ್ನು ಈ ವರದಿಯಲ್ಲಿ ಸೇರಿಸಲಾಗಿದೆ.